ಶಿಗ್ಗಾಂವ್ ತಾಲ್ಲೂಕನ್ನು "ಬರಪೀಡಿತ ಪ್ರದೇಶ" ವೆಂದು ಘೋಷಿಸುವುದು

68 (610) : ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕನ್ನು ಬರಪೀಡಿತ ಎಂದು ಘೋಷಿಸಲು ಶಿಫಾರಸ್ಸು ಮಾಡಿ ತಾಲ್ಲೂಕಿನ ತಹಶೀಲ್ದಾರ ಹಾಗೂ ಸಹಾಯಕ ಕೃಷಿ ನಿರ್ದೇಶಕರು ಜಂಟಿಯಾಗಿ ಬೆಳೆ ಸಮೀಕ್ಷೆಯನ್ನು ಮಾಡಿ, ಜಿಲ್ಲಾಧಿಕಾರಿಗಳು ಹಾವೇರಿ ಇವರಿಗೆ ದಿನಾಂಕ 30.11.2006ರಂದು ವರದಿ ಸಲ್ಲಿಸಿರುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಹಾಗಿದ್ದಲ್ಲಿ, ಶಿಗ್ಗಾಂವ ತಾಲ್ಲೂಕನ್ನು ಬರ ಪೀಡಿತ ಪ್ರದೇಶ ಎಂದು ಘೋಷಿಸಿ, ಬಡ ರೈತ ಕೂಲಿ ಕಾರ್ಮಿಕರು ವಲಸೆ ಹೋಗುವುದನ್ನು ತಡೆಯಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ?

ಶ್ರೀ ಜಗದೀಶ ಶೆಟ್ಟರ್ (ಕಂದಾಯ ಸಚಿವರು) :

ಅ) ಈ ವರದಿ ಅತಿವೃಷ್ಟಿಯಿಂದ ಹಾನಿಯಾದ ಬೆಳೆಗಳ ಕ್ಷೇತ್ರದ ವ್ಯತ್ಯಾಸದ ಬಗ್ಗೆ ಇದ್ದು ಬರಪೀಡಿತ ಪ್ರದೇಶವೆಂದು ಘೋಷಿಸುವ ಬಗ್ಗೆ ಇರುವುದಿಲ್ಲ.

ಆ) ವಾಡಿಕೆಯಂತೆ ಶಿಗ್ಗಾಂವ ತಾಲ್ಲೂಕಿನಲ್ಲಿ 672.8 ಎಂಎಂ ಮಳೆಯಾಗುತ್ತಿದ್ದು ಈ ವರ್ಷದಲ್ಲಿ 738.9 ಎಂಎಂ ಮಳೆಯಾಗಿರುತ್ತದೆ. ಮಳೆ ಕೊರತೆ ಇರದಿರುವುದರಿಂದ ಈ ತಾಲ್ಲೂಕನ್ನು ಬರಪೀಡಿತವೆಂದು ಘೋಷಣೆ ಮಾಡಿರುವುದಿಲ್ಲ.

ಶ್ರೀ ಸಿಂಧೂರ ಜಿ. ರಾಜಶೇಖರ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಆದರೆ ಶಿಗ್ಗಾಂವ್ ತಾಲ್ಲೂಕಿನಲ್ಲಿ ಅತಿವೃಷ್ಟಿಯಾಗಿಲ್ಲ, ಕೆಲವು ಭಾಗ ಮಾತ್ರ ಅತಿವೃಷ್ಟಿಯಾಗಿ ನಮ್ಮ ಭಾಗಕ್ಕೆ ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆ ಮಾಡುವ ಅವಶ್ಯಕತೆ ಇದೆ. ಅದರ ಜೊತೆಗೆ ಈ ಅತಿವೃಷ್ಟಿಯಿಂದ ಹಾಳಾದ ರೈತರಿಗೂ ಪರಿಹಾರವನ್ನು ಕೊಡಬೇಕೆಂದು ತಮ್ಮ ಮುಖಾಂತರ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಶಿಗ್ಗಾಂವ್ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲು ಅವರು

ಕೇಳಿದ್ದಾರೆ. ಆದರೆ ಇವತ್ತು ಯಾವುದೇ ಒಂದು ತಾಲ್ಲೂಕನ್ನು ಈ ಬರಗಾಲ ಪೀಡಿತ ತಾಲ್ಲೂಕು ಎಂದು ಘೋಷಣೆ ಮಾಡಲಿಕ್ಕೆ guidelines ಗಳು ಇವೆ. ಆ ಪ್ರಕಾರ ಶಿಗ್ಗಾಂವ್ ತಾಲ್ಲೂಕು ಆ guidelines ನಲ್ಲಿ ಬರುತ್ತಿಲ್ಲ. ಈವತ್ತು ಯಾವುದೇ ಒಂದು ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕಾದರೆ ಆ ಒಂದು ಋತುಮಾನದಲ್ಲಿ ಸತತವಾಗಿ ನಾಲ್ಕು ವಾರ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಒಂದು ಒಣ ಹವೆ ವಾತಾವರಣವಿದ್ದಾಗ ಅದನ್ನು ಘೋಷಣೆ ಮಾಡಬಹುದು. ಮತ್ತೆ ಸರಾಸರಿ ಮಳೆ ಶೇ.ಮೈನಸ್ 20 ಅದಕ್ಕಿಂತ ಹೆಚ್ಚಿನ ನಿರ್ಗಮನ ಇದ್ದಾಗ ಮಾಡಬಹುದು. ಮತ್ತು ಶೇ.10 ಕ್ಕಿಂತ ಹೆಚ್ಚು ಬಿತ್ತಿದ ಬೆಳೆಯು ಒಣ ಹವೆಯಿಂದ ಬಾಧಿತವಾದಾಗ ಈ ರೀತಿ ಬರಗಾಲ ತಾಲ್ಲೂಕು ಎಂದು ಘೋಷಣೆ ಮಾಡಬಹುದು. ಇಲ್ಲಿ ಈ ಒಂದು ಹಾವೇರಿ ಜಿಲ್ಲೆಯ ತಾಲ್ಲೂಕುಗಳನ್ನು ನಾವು consider ಮಾಡಿದಾಗ ಈ ಶಿಗ್ಗಾಂವ್ ನಲ್ಲಿ average ಮಳೆ 672.8 ಮಿಲಿ ಮೀಟರ್ ಇದೆ. ಈ ಸಲ ಮುಂಗಾರು ಹಿಂಗಾರುವಿನಲ್ಲಿ ಬಿದ್ದ ಮಳೆ 738.9 ಮಿಲಿ ಮೀಟರ್ ಇದೆ. ಹೀಗಾಗಿ ಈ ಎಲ್ಲಾ ಕಾರಣಗಳಿಂದ ಶಿಗ್ಗಾಂವ್ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡುವುದಕ್ಕಾಗಿಲ್ಲ. ಆ ಕಾರಣಕ್ಕಾಗಿ ಆ ರೀತಿಯ ವಾತಾವರಣವಿದ್ದರೆ ನಾವು definitely ಮಾಡುತ್ತೇವೆ. ಈ statistics ಆಧಾರದ ಮೇಲೆಯೇ ಮಾಡುತ್ತೇವೆ. ಈಗ ನಾವೇನು 178 ತಾಲ್ಲೂಕುಗಳನ್ನು ಬರಗಾಲ ಪೀಡಿತ ಎಂದು ಘೋಷಣೆ ಮಾಡಿದ್ದೇವೆ, ಈ ಒಂದು ಮಳೆಯ ಆಧಾರದ ಮೇಲೆ ನಾವು ಘೋಷಣೆಯನ್ನು ಮಾಡುತ್ತೇವೆ. ಈ ಎಲ್ಲ ಅಂಕಿಅಂಶಗಳನ್ನು ತೆಗೆದುಕೊಂಡೇ ಮಾಡುತ್ತೇವೆ. ಆ ದೃಷ್ಟಿಯಿಂದ ನಾವು ಶಿಗ್ಗಾಂವ್ ತಾಲ್ಲೂಕನ್ನು include ಮಾಡಲು ಆಗಿಲ್ಲ.

ಉಪಾಧ್ಯಕ್ಷರು: ಮಾನ್ಯ ಸಚಿವರೇ, ಅವಕಾಶವಿದ್ದರೆ ಮಾಡಿಕೊಡಿ.

ಶ್ರೀ ಸಿಂಧೂರ ಜೆ.ರಾಜಶೇಖರ್: ಶಿಗ್ಗಾಂವ್‌ನ ಪೂರ್ವ ಭಾಗದಲ್ಲಿ ಪರಿಸ್ಥಿತಿ ಬಹಳ ಗಂಭೀರ ಇದೆ. ಅದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಶಿಗ್ಗಾಂವ್ ಭಾಗದಲ್ಲಿ ಸವಣೂರು ತಾಲ್ಲೂಕು ಇದೆ. ಸವಣೂರು ತಾಲ್ಲೂಕಿನ statistics ನ್ನು ತೆಗೆದುಕೊಂಡು ನಾವು ಘೋಷಣೆ ಮಾಡಿದ್ದೇವೆ. ಇಲ್ಲಿ ಆ ರೀತಿ

ಒಂದು statistics ಇಲ್ಲದೇ ಇರುವುದರಿಂದ ಅದನ್ನು ಘೋಷಣೆ ಮಾಡಲಿಕ್ಕಾಗಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ಈಗ ತಾವು 672 ಇದ್ದುದು 738 ಆಗಿದೆ ಎಂದು ಹೇಳುತ್ತೀರಿ. ತಾವು ಅದೇ ಜಿಲ್ಲೆಯವರು. ಅಲ್ಲೇ ಅಡ್ಡಾಡಿರುತ್ತೀರಿ. ಒಂದು ತಿಂಗಳು 300 ಮಿಲಿ ಮೀಟರ್ ಮಳೆ ಆಗಿಬಿಡುವುದು. ಮತ್ತೆ ಮುಂದೆ ಎರಡು ತಿಂಗಳಲ್ಲಿ 2 ಮಿಲಿ ಮೀಟರ್ ಅಲ್ಲಿ ಈ ರೀತಿ ಮಳೆ ಆಗಿದೆ. ಸವಣೂರಿನಲ್ಲಿ ಒಂದು ಕಡೆ ಅತಿವೃಷ್ಟಿ; ಒಂದು ಕಡೆ ಅನಾವೃಷ್ಟಿಯಾಗಿದೆ. ದಯವಿಟ್ಟು ತಾವು ಅದನ್ನು ನೋಡಬೇಕು. ಅತಿವೃಷ್ಟಿಯಾಗಿ ಜನರು ಸಂಪೂರ್ಣ ಹಾಳಾಗಿಹೋಗಿದ್ದಾರೆ. ಇನ್ನೊಂದು ಕಡೆ ಅನಾವೃಷ್ಟಿ ಇದೆ. ಈ ಕಾರಣದಿಂದ ಅದನ್ನು ಸರ್ವೆ ಮಾಡಿಸಿ ಅದನ್ನು ಬರಗಾಲ ಪೀಡಿತ ಪ್ರದೇಶವೋ ಅಥವಾ ಅತಿವೃಷ್ಟಿ ತಾಲ್ಲೂಕು ಎಂದು ಹೆಚ್ಚಿನ ಅನುದಾನ ಕೊಡುವ ವ್ಯವಸ್ಥೆ ಮಾಡಲು ಯೋಗ್ಯ ಇದೆ ಎನ್ನುವ ಮಾತನ್ನು ತಮ್ಮ ಮುಖಾಂತರ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ಈ rain gauge ಗಳು ತಾಲ್ಲೂಕುಗಳಲ್ಲಿ ಬಹಳ ಕಡಿಮೆ ಇವೆ. ದಯವಿಟ್ಟು rain gauge ಗಳನ್ನು ಪ್ರತಿ ಪಂಚಾಯಿತಿಗೆ ಒಂದೊಂದು ಆಗುವ ಹಾಗೆ ತಾವು ಮಾಡಿ ಅದರ average ನ್ನು ತೆಗೆದುಕೊಂಡು ನೀವು ಬರ ಪೀಡಿತ ಪ್ರದೇಶವೋ ಹೌದೋ ಅಲ್ಲವೋ ಎನ್ನುವ ನಿರ್ಧಾರಕ್ಕೆ ಬರುವ ಹಾಗೆ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಆರ್.ಧ್ರುವನಾರಾಯಣ: ಮಾನ್ಯ ಉಪಾಧ್ಯಕ್ಷರೇ, guidelines ನಲ್ಲಿ ತಾವು ಮಳೆಯನ್ನು main ಆಗಿ ಇಟ್ಟುಕೊಳ್ಳುತ್ತೀರಿ, Rain fall data ಏನಿದೆ ಎಂದು. ನಮ್ಮಲ್ಲಿ ಈಗ ಉದಾಹರಣೆಗೆ ನಂಜನಗೂಡು ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿದ್ದೀರಿ. ಅದರಲ್ಲಿ ಮೂರು ಹೋಬಳಿಗೆ ನೀರಾವರಿ ಸೌಲಭ್ಯ ಇದೆ. ಇನ್ನು ಮೂರು ಹೋಬಳಿಗಳಿಗೆ ಮಳೆ ಆಶ್ರಯ ಇರುತ್ತದೆ. ಆದರೆ ಒಂದು ಕೋಟಿ ರೂ.ಒಂದು ತಾಲ್ಲೂಕಿಗೆ ಬಿಡುಗಡೆಯಾದಾಗ, ಆ ಬರಪೀಡಿತ ಏನು dry landsಗಳಿರುತ್ತವೆ, ಅವುಗಳಿಗೆ ಮಾತ್ರ ಸೀಮಿತವಾಗಿರಬೇಕು. ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿ ಕೂಡ ನಾಲ್ಕೈದು ತಾಲ್ಲೂಕುಗಳಿವೆ. ಕೆಲವು ಕಡೆ ನೀರಾವರಿ ಇದೆ. ಆದರೆ ಮಳೆಯಾಗಿಲ್ಲ. ಮಳೆಯಾಗಿಲ್ಲವೆಂದು ಹೇಳಿ ನೀವು ಆ ತಾಲ್ಲೂಕನ್ನು ಬರಪೀಡಿತ

ಪ್ರದೇಶವೆಂದು ಘೋಷಣೆ ಮಾಡುತ್ತೀರಿ. ಅಲ್ಲಿಗೆ ನೀರಾವರಿ ಅನುಕೂಲತೆ ಇರುತ್ತೆ. ಆದರೆ ಎಲ್ಲಿ ಮಳೆಯಾಗಿಲ್ಲ, dry land ಇರುತ್ತೆ, ಅಲ್ಲಿಗೆ ಮಾತ್ರ ಹಣ ವಿನಿಯೋಗ ಆಗುವ ಹಾಗೆ ತಾವು ಮಾಡಿಸಬೇಕು.

ಶ್ರೀ ಶಿವರಾಜ್ ಸಜ್ಜನರ್: ಮಾನ್ಯ ಉಪಾಧ್ಯಕ್ಷರೇ, ಹಾವೇರಿ ಮತ್ತು ಹಾನಗಲ್ ತಾಲ್ಲೂಕಿನಲ್ಲಿ ಅಕ್ಟೋಬರ್ ನಲ್ಲಿ ಮೈನಸ್ 86 ಮತ್ತು ಮೈನಸ್ 92 ಮಳೆಯಾಗಿದೆ. ಅಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಮಳೆಯಾಗಿದೆ. ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ನಮ್ಮ ಜಿಲ್ಲೆಯಲ್ಲಿ ಸಭೆಯನ್ನು ಮಾಡಿದಾಗ ಇದನ್ನು ಸ್ಪಷ್ಟವಾಗಿ ಅಧಿಕಾರಿಗಳು ಹೇಳಿದ್ದಾರೆ. ಎರಡೂ ತಾಲ್ಲೂಕುಗಳನ್ನು ಬರಗಾಲ ಎಂದು ಘೋಷಣೆ ಮಾಡಬೇಕೆಂದು ಹೇಳಿ ಅವತ್ತು ಕೂಡ ನಾವು ವಿನಂತಿ ಮಾಡಿಕೊಂಡಿದ್ದೆವು. ಆದರೆ ಇವತ್ತಿಗೂ ಆ ಆದೇಶ ಹೊರಬೀಳಲಿಲ್ಲ. ದಯವಿಟ್ಟು ತಮ್ಮ ಮುಖಾಂತರ ನಾನು ಕಂದಾಯ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ, ಆ ಎರಡೂ ತಾಲ್ಲೂಕುಗಳನ್ನು ಬರಗಾಲ ಎಂದು ಘೋಷಣೆ ಮಾಡಬೇಕು.

ಶ್ರೀ ಕೃಷ್ಣ ಸಿ.ಬೈರೇಗೌಡ: ಮಾನ್ಯ ಉಪಾಧ್ಯಕ್ಷರೇ, ಸಚಿವರ ಗಮನಕ್ಕೆ ಒಂದೇ ಒಂದು ವಿಷಯವನ್ನು ತರಲಿಕ್ಕೆ ಬಯಸುತ್ತೇನೆ. ಅವರು ಹೇಳುವುದನ್ನು ಗಮನಿಸಿದಾಗ ಎಷ್ಟೋ ಕಡೆ ಈ rain gauge ಗಳು actually ಕೆಲಸವನ್ನೇ ಮಾಡುತ್ತಿಲ್ಲ. ಅದು ಯಾವುದೋ ಒಂದು ವರ್ಷದ ಮಾಹಿತಿಯನ್ನು ಇಟ್ಟುಕೊಂಡು ಆ ವಿಲೇಜ್ ಅಕೌಂಟೆಂಟ್‌ಗಳವರು ಪ್ರತಿ ವರ್ಷ ಬರೆದು ಬರೆದು ಕಳುಹಿಸುತ್ತಾರೆ. ಅಲ್ಲಿ ನಾವು ವಾಸ್ತವವಾಗಿ ಓಡಾಡುತ್ತಿರುತ್ತೇವೆ. ಅಲ್ಲಿ ಮಳೆಯೇ ಬಿದ್ದಿರುವುದಿಲ್ಲ. ಬರೀ ದಾಖಲೆಗಳನ್ನು ನೋಡಿದಾಗ ಇಷ್ಟು ಮಟ್ಟಿಗೆ ಮಳೆಯಾಗಿದೆ ಎಂದು ಹೇಳಿ ತಪ್ಪು ವರದಿ ಬರುತ್ತದೆ. ಮಾನ್ಯ ಡಿ.ಆರ್.ಪಾಟೀಲರು ಹೇಳಿದ ಹಾಗೆ ಈ rain gauge ಗಳನ್ನು ಪ್ರತಿಯೊಂದು ಪಂಚಾಯಿತಿಯಲ್ಲೂ ಒಂದು ಮಾಡತಕ್ಕದ್ದು, ಮತ್ತು ಅವುಗಳು ಸರಿಯಾಗಿ ಕೆಲಸ ಮಾಡುತ್ತಿವೆಯೇ ಎನ್ನುವುದನ್ನು ನೀವು ensure ಮಾಡಿದರೆ ನಿಜವಾಗಿಯೂ ಒಂದು ಸರಿಯಾದ ಮಾಹಿತಿ ಸರ್ಕಾರಕ್ಕೆ ಸಿಗುತ್ತದೆ. ಇದು ಎಲ್ಲರಿಗೂ ಅನ್ವಯಿಸುತ್ತದೆ, ನಮಗೆ ಮಾತ್ರವಲ್ಲ, ಇಡೀ ರಾಜ್ಯಕ್ಕೆ ಅನ್ವಯಿಸುವಂಥ ವಿಷಯ.

ಶ್ರೀ ಎಸ್.ಎಸ್.ಪಾಟೀಲ್: ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲೇ ಕುಳಿತಿದ್ದಾರೆ. ಅವರು ಏನೂ ಹೇಳಲಿಲ್ಲವಲ್ಲ. ಸಚಿವರು ದಿನಾ ನೋಡುತ್ತಿರುತ್ತಾರಲ್ಲ, ಅವರು ಮಂತ್ರಿಗಳಿಗೆ ಹೇಳಬೇಕು.

ಶ್ರೀ ಸಿಂಧೂರ ಜಿ.ರಾಜಶೇಖರ್: ಮಾನ್ಯ ಪಾಟೀಲರು ಹೇಳಿದ ಹಾಗೆ ಅದು ನಿಜ ಇದೆ. ಆ rain gauge ಗಳನ್ನು ಪ್ರತಿ ಪಂಚಾಯಿತಿಗೂ ಹಾಕುವುದು ಬಹಳ ಉಪಯುಕ್ತ ಇದೆ. ಮಾಹಿತಿಗಳನ್ನು ತಾಲ್ಲೂಕಿನಿಂದ ಕಳುಹಿಸುವುದರಿಂದ ಸರಿಯಾದ ಮಾಹಿತಿಗಳು ಸರ್ಕಾರಕ್ಕೆ ಸಿಗುವುದಿಲ್ಲ. ಅದಕ್ಕೆ ಪಂಚಾಯಿತಿಯಿಂದ ಮಾಹಿತಿಯನ್ನು ತರಿಸಿಕೊಂಡು ಅದರ ಬಗ್ಗೆ ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೇ, ಈ ಬೆಳೆ ವಿಮೆ ಬಂದಾಗ ಸರಿಯಾದ ಒಂದು ಮಾಹಿತಿ ಸಿಗುವುದಿಲ್ಲ. ಈ ಗ್ರಾಮ ಪಂಚಾಯಿತಿಗೊಂದೊಂದು rain gauge, ಅದು ಏಳು ಸಾವಿರ ರೂ.ಮಾತ್ರ. ಅದಕ್ಕೇನು ಜಾಸ್ತಿ training ಕೂಡ ತೆಗೆದುಕೊಳ್ಳಬೇಕಾಗಿಲ್ಲ. Secretary ಗಳಿಗೆ ಒಂದು ವಾರದ training ನ್ನು ಕೊಟ್ಟು ಒಂದೊಂದು ಗ್ರಾಮ ಪಂಚಾಯಿತಿಯಲ್ಲಿ ಏಳೆಂಟು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಈ rain gauge ಗಳನ್ನು ಕೂಡಿಸಿಬಿಟ್ಟರೆ ನಮಗೆ ಈ ಬೆಳೆವಿಮೆ assess ಮಾಡುವಾಗಲೂ ಕೂಡ ಬಹಳ ದೊಡ್ಡ ಉಪಕಾರವಾಗುತ್ತದೆ. ದಯಮಾಡಿ ಸರ್ಕಾರ ಅದನ್ನು policy matter ಎಂದು ತೆಗೆದುಕೊಂಡರೆ, ಅದು ಕಂದಾಯ ಇಲಾಖೆಗೆ ಬಹಳ ಅನುಕೂಲವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಡಿ.ಆರ್.ಪಾಟೀಲರು ಮತ್ತು ಇನ್ನಿತರರು ಈ rain gauge ಬಗ್ಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅದನ್ನು ಅಳವಡಿಸುವ ಬಗ್ಗೆ ಹೇಳಿದ್ದಾರೆ. ಅದನ್ನು ಸರ್ಕಾರ ಗಂಭೀರವಾಗಿ ಪರಿಶೀಲನೆಯನ್ನು ಮಾಡುತ್ತದೆ. ಮತ್ತು ಅದೇ ರೀತಿ satellite rain gauge ಬಗ್ಗೆ ಆದರೆ ಸಂಪೂರ್ಣವಾಗಿ ಎಲ್ಲ ಪ್ರದೇಶದ್ದು ತಕ್ಷಣವೇ ನಮಗೆ ಮಾಹಿತಿ ಸಿಗಲು ಸಾಧ್ಯ ಇದೆ. ಅದರ ಬಗ್ಗೆಯೂ ನಾವು ಪರಿಶೀಲನೆ ಮತ್ತು ಚಿಂತನೆಯನ್ನು ಮಾಡುತ್ತೇವೆ. ಇದರ ಜೊತೆಗೆ ಈಗ ಮಾನ್ಯ ಸಜ್ಜನರ್‌ರವರು ಮತ್ತು ನಮ್ಮ ಶಿಗ್ಗಾಂವ್ ಶಾಸಕರು ಹಾಗೂ ನಮ್ಮ ಚಾಮರಾಜನಗರ ಶಾಸಕರು ಮತ್ತು ಇತರರು ಮಾನ್ಯ ಧ್ರುವನಾರಾಯಣ,

ಮಾನ್ಯ ಡಿ.ಆರ್.ಪಾಟೀಲರು, ಮಾನ್ಯ ಬಿ.ಆರ್.ಪಾಟೀಲರು, ಮತ್ತು ಮಾನ್ಯ ಕೃಷ್ಣ ಬೈರೇಗೌಡರು ಏನು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ, ಇವತ್ತು ಈ ಒಂದು ವಿಷಯದ ಬಗ್ಗೆ ಈಗ ನಾವು ಕೆಲವು ಅಂಕಿ ಸಂಖ್ಯೆಗಳ ಆಧಾರದ ಮೇಲೆ declare ಮಾಡುತ್ತೇವೆ. ಈಗ ಹಾವೇರಿ ಮತ್ತು ಶಿಗ್ಗಾಂವ್‌ದು ಅವರು ಇನ್ನು ಅದರ ಬಗ್ಗೆ statistics ನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ, ಅದರ ಬಗ್ಗೆ ಪರಿಶೀಲನೆ ಮಾಡಿ ಆ ಒಂದು guidelinesನ ವ್ಯಾಪ್ತಿಯಲ್ಲಿ ಅದು ಬರುವುದಾದರೆ, definite ಆಗಿ ಅವುಗಳನ್ನು ನಾವು declare ಮಾಡುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಧಾರ್ಮಿಕ ಸಾಮಾಜಿಕ ಸಂಸ್ಥೆಗಳಿಗೆ ಭೂ ಹಂಚಿಕೆ ಮಾಡಲು ಅನುಸರಿಸಬೇಕಾಗಿರುವ ನಿಯಮಗಳು ಹಾಗು ಷರತ್ತುಗಳು

70 (624): ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಸಂಸ್ಥೆಗಳಿಗೆ ಜಮೀನು ಮಂಜೂರಿ ಬಗ್ಗೆ ಸರ್ಕಾರವು ಯಾವುದಾದರೂ ನಿಖರವಾದ ನಿಯಮ ಮತ್ತು ಷರತ್ತುಗಳನ್ನು ಹೊಂದಿರುತ್ತದೆಯೇ;

ಆ) ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಸೌಲಭ್ಯವನ್ನು ಪಡೆದ ಧಾರ್ಮಿಕ ಮತ್ತು ಸಾಮಾಜಿಕ ಸಂಸ್ಥೆಗಳ ಸಂಖ್ಯೆ ಎಷ್ಟು ; (ಅಂತಹ ಸಂಸ್ಥೆಗಳ ಹೆಸರು ಮತ್ತು ವಿಳಾಸವನ್ನು ಒದಗಿಸುವುದು);

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) –

ಅ) ಹೌದು,

ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು 1969ರ ನಿಯಮ 21ರಂತೆ ಧಾರ್ಮಿಕ ಮತ್ತು ಸಾಮಾಜಿಕ ಸಂಸ್ಥೆಗಳಿಗೆ ಜಮೀನು ಮಂಜೂರು ಮಾಡಲು ಸರ್ಕಾರಕ್ಕೆ ಅವಕಾಶವಿರುತ್ತದೆ.

ಆ) ಬೆಂಗಳೂರು ನಗರ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಸೌಲಭ್ಯವನ್ನು ಪಡೆದ ಧಾರ್ಮಿಕ ಮತ್ತು ಸಾಮಾಜಿಕ ಸಂಸ್ಥೆಗಳ ವಿವರ ಈ ಕೆಳಕಂಡಂತಿವೆ.